ಸಚ್ಚೇರಿಪೇಟೆ ಪ್ರಾಥಮಿಕ ಆರೋಗ್ಯ ಘಟಕಕ್ಕೆ ವೈದ್ಯಾಧಿಕಾರಿ ಹಾಗೂ ಪಡಂ ಬಿದ್ರೆ ಆರೋಗ್ಯ ಕೇಂದ್ರಕ್ಕೆ ಮಹಿಳಾ ವೈದ್ಯಾಧಿಕಾರಿ ನೇಮಕ ಮಾಡುವ ಬಗ್ಗೆ.

ತಿಕೆ. ಶ್ರೀ ವಸಂತ ವಿ. ಸಾಲಿಯನ (ಕಾಪು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಚ್ಚೇರಿ ಪೇಟೆ ಪ್ರಾಥಮಿಕ ಆರೋಗ್ಯ ಘಟಕಕ್ಕೆ ವೈದ್ಯಾಧಿಕಾರಿಯನ್ನು ಹಾಗೂ ಪಡಂಬಿದ್ರೆ ಆರೋಗ್ಯ ಕೇಂದ್ರಕ್ಕೆ ಮಹಿಳಾ ವೈದ್ಯಾಧಿಕಾರಿಯನ್ನು ಯಾವಾಗ ನೇಮಕ ಮಾಡಲಾಗುವುದು ?

ಆ) ಇಲ್ಲಿಯವರೆಗೂ ನೇಮಕ ಮಾಡದಿರಲು ಕಾರಣಗಳೇನು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು).—

ಅ) ಸಚ್ಚೇರಿ ಪೇಟೆ ಪ್ರಾಥಮಿಕ ಆರೋಗ್ಯ ಘಟಕಕ್ಕೆ ಪುರುಷ ವೈದ್ಯರನ್ನು ನೇಮಿಸಿದೆ. ಪ್ರಾಥಮಿಕ ಆರೋಗ್ಯ ಕೇಂದ್ರ ಪಡುಬಿದ್ರೆಗೆ ಮಹಿಳಾ ವೈದ್ಯರನ್ನು ಆದಷ್ಟು ಬೇಗ ನೇಮಿಸಲಾಗುವುದು.

ಆ) ಮಹಿಳಾ ವೈದ್ಯರ ಅಭಾವದಿಂದ ತಡಂಬಿಲ್ಲ.

ಗಮನ ಸೆಳೆಯುವ ಸೂಚನೆಗಳು

ಕಾನೂನು ಪದವೀಧರ ಸ್ಪೆಷಫಂಡರಿ ನ್ಯಾಯವಾದಿಗಳಿಗೆ ಸ್ಪೆಷಲ್ ಫೆಡರಿ ಮೊತ್ತವನ್ನು ಬಿಡುಗಡೆ ಮಾಡದಿರುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—೧೯೮೫ ನೇ ಸೆಪ್ಟೆಂಬರ್ ಮಾಹೆಯಿಂದ ಕಾನೂನು ಪದವೀಧರರ/ಕಿರಿಯ ನ್ಯಾಯವಾದಿಗಳಿಗೆ ಸ್ಪೆಷಲ್ ಫೆಡರಿ ಮೊತ್ತವನ್ನು ಬಿಡುಗಡೆ ಮಾಡದಿರುವುದರಿಂದ ಉಂಟಾದ ಅನಾನುಕೂಲದ ಬಗ್ಗೆ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಹಾಗೂ ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಂಡಿಸಿರತಕ್ಕ ಗಮನ ಸೆಳೆಯುವ ಸೂಚನೆಗೆ ಈ ಕೆಳಕಂಡ ಲಿಖಿತ ಹೇಳಿಕೆಯನ್ನು ಕೊಡಬಯಸುತ್ತೇನೆ.

ಇದು ಒಂದು ಯೋಜನಾ ಸ್ಕೀಮು. ಬಜೆಟ್‌ನಲ್ಲಿ ಏರ್ಪಾಟು ಮಾಡಿದ ಮೊತ್ತವನ್ನು ಹಿಂದುಳಿದ ವರ್ಗಗಳಿಗೆ ಸೇರಿದ ಸ್ಪೆಷಫಂಡರಿಗಳಿಗಾಗಿ ವೆಚ್ಚ ಮಾಡಲಾಯಿತು ಮತ್ತು ಕಾನೂನು ಮಂತ್ರಿ ಸಂಸದೀಯ ವ್ಯವಹಾರಗಳ ಇಲಾಖೆಯು ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಗಳನ್ನು ಹೆಚ್ಚುವರಿ ನಿಧಿಗಳ ಅನುದಾನಕ್ಕಾಗಿ ಕೋರಿತು. ಹೆಚ್ಚುವರಿ ಅನುದಾನಗಳನ್ನು ಪಡೆಯುವುದಕ್ಕಾಗಿ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ, ಆರ್ಥಿಕ ಇಲಾಖೆ, ಯೋಜನಾ ಇಲಾಖೆ ಮತ್ತು ಮೊತ್ತವನ್ನು ಯಾವ ಇಲಾಖೆಯಿಂದ ಪಡೆಯಬೇಕಾಗಿದೆಯೋ ಆ ಇಲಾಖೆ ಇವುಗಳೊಂದಿಗೆ ಸಮಾಲೋಚಿಸಿದ ತರುವಾಯ ಇತರ ಯೋಜನಾ ಸ್ಕೀಮಿನಿಂದ ಮೊತ್ತವನ್ನು ಪಡೆಯುವುದು ಅವಶ್ಯವಾಯಿತು. ಜೀತದಾಳುಗಳ ಪುನರ್ವಸತಿಗಾಗಿ ಹೆಚ್ಚಿಕೆಯಾದ ಮೊತ್ತದಲ್ಲಿ ಯೋಜನಾ ಮೊಬಲಗು ಲಭ್ಯವಿರುವುದು ಕಂಡುಬಂದಿದೆ. (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್) ಇಲಾಖೆ, ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಯೊಂದಿಗೆ ಸಮಾಲೋಚಿಸಿದ ತರುವಾಯ ಸದರಿ ಉದ್ದೇಶಕ್ಕಾಗಿ ಅಗತ್ಯವಿರುವ ಮೊತ್ತವನ್ನು ಹಂಚಿಕೆ ಮಾಡಲಾಗಿದೆ. ಮತ್ತು ಅವಶ್ಯವಿರುವ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ. ಈ ವಿದ್ಯುಕ್ತ ಕ್ರಮಗಳನ್ನು ಅನುಸರಿಸಬೇಕಾಗಿದ್ದುದರ ಪ್ರಯುಕ್ತ ಸ್ವಲ್ಪ ವಿಳಂಬವಾಯಿತು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನಾನು ಕೇಳಿದ್ದುದು ಸೆಪ್ಟೆಂಬರ್‌ನಿಂದ ಹಣ ಬಿಡುಗಡೆ ಮಾಡಬೇಕಾಗಿತ್ತು, ಎಂದು. ಇಷ್ಟು ತಡ ಆಗುವುದಕ್ಕೆ ಕಾರಣ ಏನು? ರೆಗ್ಯುಲರ್ ಆಗಿ ಕೆಲಸ ನಡೆಯಬೇಕು, ಅದು ನಡೆದಿಲ್ಲ ಇದರ ಬಗ್ಗೆ ಹೇಳಬೇಕು.